## ಬುತ್ತಿ ಚಿಗುರು

### ಸೂಪರ್ ಐಡಿಯಾ...

ಸಾಂಪ್ರ ಮನೆಗೆ ಸಾಮಾನು ತರಲು ಸೂಪರ್ ಮಾರ್ಕೆಟ್‌ಗೆ ಹೊರಟಿದ್ದ. ಹೆಂಡ್ತಿ ಶೀಲಾ ಹೇಳಿದಳು, 'ರೀ, ಒಂದು ಪ್ಯಾಕ್ ಹಾರ್ಲಿಕ್ಸ್ ತನ್ನಿ. ಅಲ್ಲಿ ದಾಳಿಂಬೆ ಹಣ್ಣು ಕಂಡ್ರೆ ಹತ್ತು ತನ್ನಿ...' ಎಂದು.ಸಾಂಪ್ರ ಮಾರ್ಕೆಟ್‌ನಿಂದ ಮನೆಗೆ ಬಂದ. ಶೀಲಾ ಅವನ ಕೈಯಲ್ಲಿನ ಬ್ಯಾಗು ತೆಗೆದು ನೋಡಿದಳು. ಹತ್ತು ಪ್ಯಾಕ್ ಹಾರ್ಲಿಕ್ಸ್ ತಂದಿದ್ದ! ಶೀಲಾ ಕೇಳಿದಳು. 'ಯಾಕ್ರಿ? ಹತ್ತು ಪ್ಯಾಕ್ ಹಾರ್ಲಿಕ್ಸ್ ತಂದ್ರಿ?' ಸಾಂಪ್ರ ಹೇಳಿದ, 'ನೀನೆ ಹೇಳಿದ್ದಿಯಲ್ವಾ? ಒಂದು ಹಾರ್ಲಿಕ್ಸ್ ಪ್ಯಾಕ್ ತನ್ನಿ, ದಾಳಿಂಬೆ ಕಂಡ್ರೆ ಹತ್ತು ತನ್ನಿ ಅಂತ. ದಾಳಿಂಬೆ ಕಾಣ್ತು. ಅದ್ಕೆ ಹತ್ತು ಪ್ಯಾಕ್ ಹಾರ್ಲಿಕ್ಸ್ ತಂದೆ' ಎಂದ.

**ಮಂಡ್ಯ ಮ.ನಾ. ಉಡುಪ**



---



### ಟೂತ್ ಪಿಕ್ಸ್

ರಮೇಶ ಲ್ಯಾಬ್ ಟೆಕ್ನಿಷಿಯನ್ ಹುದ್ದೆಗೆ ಅರ್ಜಿ ಹಾಕಿದ್ದ. ಸಂದರ್ಶನದಲ್ಲಿ ಅವನಿಗೆ ಒಂದೇ ಪ್ರಶ್ನೆ ಕೇಳಲಾಯಿತು. ಅವನ ಉತ್ತರ ಕೇಳಿದ ಸಂದರ್ಶಕರು ಎರಡನೇ ಪ್ರಶ್ನೆಯನ್ನು ಕೇಳಲೇ ಇಲ್ಲ. ಅದೇನೆಂದರೆ, ದಂತವೈದ್ಯರು ತಮ್ಮ xrayಗಳನ್ನು ಏನೆಂದು ಕರೆಯುತ್ತಾರೆ? ಎಂದು ಕೇಳಿದಾಗ ರಮೇಶ, `ಟೂತ್ ಪಿಕ್ಸ್ ಎಂದು ಕರೆಯುತ್ತಾರೆ' ಎಂದು ಉತ್ತರಿಸಿದ್ದ.

**ಕಾವ್ಯಾ ಎಸ್.ಎಚ್.**